ಟ್ರಾಫಿಕ್‌ಅನ್ನು ತಾನು ಹೇಗೆ ದಾಟಿದೆನೆಂದು ಅವನಿಗೇನೆ ಆಶ್ಚರ್ಯವಾಯಿತು. ಮನಸ್ಸು ಮಾತು ಕೇಳದಿದ್ದರೂ ಕೈ ಕಾಲುಗಳಾದರೂ ಕೇಳುತ್ತಿವೆಯೆಂದು ನಾಗರಾಜ ಸಂತೋಷಪಟ್ಟ. ಈ ಹೋಟೆಲಿಗೆ ಬಂದಾಗ ಆತ ಯಾವಾಗಲೂ ಕೂಡುತ್ತಿದ್ದ ಮೂಲೆಯ ಟೇಬಲ್ಲನ್ನೂ ಯಾರೋ ಕಬಳಿಸಿ ತಮ್ಮ ನಿತ್ಯ ಪುರಾಣದ ಗಂಟು ಬಿಚ್ಚಿಕೊಂಡಿದ್ದರು. ಹೋದಲ್ಲೆಲ್ಲ ತನ್ನ ಜಾಗವನ್ನು ಆಕ್ರಮಿಸಿಕೊಳ್ಳಲಾಗುತ್ತಿದೆ! ಹೋಟೆಲಿನಲಿ ತಾನು ಬಯಸಿದ ಜಾಗ ಸಿಗಲು ಇದೇನು ನಮ್ಮಪ್ಪನ ಆಸ್ತಿಯೇ? ಈ ಹೋಟೆಲೇನು ತಾನು ಕೊಂಡುಕೊಂಡ ಜಾಗವೆ? ತಾನು ಕೂಡುತ್ತಿದ್ದ ತನ್ನ ಕುರ್ಚಿಯ ಬಗ್ಗೆ ಅಷ್ಟೇಕೆ ಮೋಹಿತನಾಗಬೇಕು. ವಿಪರೀತ ಯೋಚನೆಯಿಂದ ತನಗೆ ಹುಚ್ಚು ಹಿಡಿದಿರಬೇಕೆಂದು ಅವನು ಭಾವಿಸಿ ವಾಸ್ತವಕ್ಕೆ ಮರಳಬೇಕೆಂದು ಮತ್ತೆಮತ್ತೆ ತನ್ನ ಕೈ, ಕಾಲು, ಮೂಗು, ಗಲ್ಲಗಳನ್ನು ತಾನೇ ಚಿವುಟಿಕೊಳ್ಳುತ್ತಿದ್ದ. ಹೊಟ್ಟೆ ಹಸಿದಿತ್ತಾದರೂ ಏನೂ ತಿನ್ನಲಿಲ್ಲ. ಒಂದು ಕಪ್ ಚಹಾ ಕುಡಿದ. ವೇಟರ್ ಬಿಲ್ ತಂದುಕೊಟ್ಟಾಗ ಇನ್ನೊಂದು ಕಪ್ ಚಹಾ ಎಂದ. 'ಎಲ್ಲಿಯ ಗಿರಾಕಿಯೋ ಏನೋ? ಮಟಮಟ ಮಧ್ಯಾಹ್ನದಾಗ ಕುಡದ ಬಂದಾನ ಕಾಣ್ತದ...' ವೇಟರ್ ಮತ್ತೊಬ್ಬ ವೇಟರ್‌ನೊಂದಿಗೆ ಗುಣುಗುಟ್ಟಿದ. ವೇಟರ್‌ಗಳ ಕಷ್ಟಗಳು ವೇಟರ್‌ಗಳಿಗೆ ಮಾತ್ರ ಗೊತ್ತು. ಈ ಗಿರಾಕಿ ಬೇಗನೆ ಎದ್ದು ಹೋಗಲಿ ಎಂಬಂತೆ ಚಹಾಗ್ಲಾಸ್ ತಂದು ರಪ್ ಅಂತ ಇಟ್ಟ. ಅವನು ಇಟ್ಟ ರಭಸಕ್ಕೆ ಗಾಜಿನ ಲೋಟ ಸೀಳಿರಬೇಕು. ವೇಟರ್ ಕೂಡ ತನ್ನ ಗಂಟಲೊಳಗೆ ಗಾಜು ತುರುಕುತ್ತಿದ್ದಾನೆ! ತುಟಿಯತನಕ ಬಂದಿದ್ದ ಬೈಗುಳನ್ನು ಹೇಳಿಬಿಡಬೇಕಿತ್ತು ಈ ಸೊಕ್ಕಿನ ವೇಟರ್‌ನಿಗೆ. ಏನಾಗುತ್ತಿದೆ ತನಗೆ. ಹೇಳಬೇಕೆಂದಿದ್ದನ್ನು ಹೇಳಲಾಗುತ್ತಿಲ್ಲ. ಮಾವನಿಗೂ ತನ್ನಂತರಂಗದ ಮಾತು ಹೇಳಿ ಬರಬೇಕಾಗಿತ್ತು. ತಾನೇಕೆ ಅಷ್ಟು ದುರ್ಬಲನಾಗುತ್ತಿದ್ದೇನೆ. ನಾಗರಾಜ ಹಳಹಳಿಸಿದ.

ಅಷ್ಟರಲ್ಲಿ ಅವನ ಟೇಬಲ್ಲಿಗೆ ಮಹಿಳೆಯೊಬ್ಬಳು ನಡೆದುಬರುತ್ತಿದ್ದಳು. ಅವಳ ನಡಿಗೆಯಿಂದ, ನಗುಮುಖದಿಂದ ಅವಳು ಸುಶೀಲಾ ಎಂಬುದನ್ನು ದೂರದಿಂದಲೇ ಗುರುತಿಸಿದ. ಅವನ ಉದ್ವೇಗ ತುಟಿ ದಾಟಿ ಬಂದಿತು. ಸುಶೀಲಾ! ಅವನು ಜೋರಾಗಿಯೆ ಅಂದ. ಎಲ್ಲರೂ ಅವನತ್ತ ನೋಡಿದರು. ಅವರಿವರ ದೃಷ್ಟಿಯನ್ನು ಗೌಣವಾಗಿಸಲೆಂದು ಆತ ತನಗೆ ಚೆನ್ನಾಗಿಯೇ ಪರಿಚಿತ ಎಂಬುದನ್ನು ಅರುಹಲು ಅವಳು ಜೋರಾಗಿಯೇ ಅಂದಳು: 'ಮತ್ತೂ ಹೇಳಲಾರದ ಬಂದಿ. ಹೇಳಲಾರದ ಹೊಂಟಿದ್ದಿ. ಹೌದಲ್ಲೋ?' ಆಕೆಯ ದೃಷ್ಟಿ ಎದುರಿಸಲಾರದೆ ನಾಗರಾಜ ಮುಖ ಕೆಳಗೆ ಹಾಕಿದ. ಅವಳ ಅಪ್ಪನ ಹೋಟೆಲು ತಮ್ಮ ಜಾಂಬೂರಿನ ಅಗಸಿಯಲ್ಲಿತ್ತು. ಈಕೆ ಗಲ್ಲೆ ಟೇಬಲ್ ಮೇಲೆ ಕೂತು ದುಡ್ಡು ಇಸಿದುಕೊಳ್ಳುತ್ತಿದ್ದಳು. ತಾವು ಒಂದಿಬ್ಬರು ಗೆಳೆಯರು ಅಲ್ಲಿ ಹೋಗಿ ಚಹಾ ಕುಡಿಯುತ್ತಿದ್ದೆವು. ಶಂಕರಪ್ಪಮಾವ ಒಂದೆರಡು ಸಲ ಕರೆದುಕೊಂಡು ಹೋಗಿ ತನಗೆ ಬೇಸನ್ ಲಾಡು, ತೋಯಿಸಿದ ಚುರುಮುರಿ ಕೂಡ ಕೊಡಿಸಿದ್ದ. ಆಕೆಯ ಅಪ್ಪ ಮತ್ತು ಮಾವನಿಗೆ ತುಂಬ ದೋಸ್ತಿಯಿತ್ತು. ತಾವು ಚುರುಮುರಿ ತಿನ್ನಲಿಕ್ಕೆ, ಚಹಾ ಕುಡಿಯಲಿಕ್ಕೆ ಹೋದರೆ ಈ ಹುಡುಗರು ತನ್ನನ್ನು ನೋಡಲು ಬರುತ್ತಾರೆಂದು, ತನ್ನನ್ನು ಸುಖಾಸುಮ್ಮನೆ ಕಾಡಿಸುತ್ತಾರೆಂದು ಎಷ್ಟೊಂದು ಸೊಕ್ಕು ಮಾಡುತ್ತಿದ್ದಳು ಈಕೆ.

ಒಂದು ಸಲ ಒಂದಿಬ್ಬರು ಗೆಳೆಯರು ಠಾಕು ಠೀಕಾಗಿ ಚಾದಂಗಡಿಗೆ ಬಂದರು. ತಿಂದ ಮೇಲೆ ನೋಡುತ್ತಾರೆ, ದುಡ್ಡು ಕಡಿಮೆ ಇದೆ. ಅವರಿಗೆ ಹೆದರಿಕೆಯಾಯಿತು. ಇವಳೆ ದುಡ್ಡು ಇಸಿದುಕೊಳ್ಳುವ ಗಲ್ಲೆದ ಮೇಲೆ ಕೂತಿದ್ದಳು. ನಾಗರಾಜ ಅಂದ: 'ಸುಶೀಲಾ ಅದಾಳು. ಏನ ಹೆದರಬೇಕಾಗಿಲ್ಲ. ನಾ ಹೇಳ್ತೇನಿ. ನೀವು ಸುಮ್ಮನ ನನ್ನ ಹಿಂದ ಬರ್ರಿ.' ಮಳ್ಳತನದಲ್ಲಿ ಅವರು